# ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿರುತ್ತದೆ)


ನಿಗಮ ಕಛೇರಿ, ನಂ 29,
ಕಾವೇರಿ ಗ್ರಾಮೀಣ ಬ್ಯಾಂಕ್ ರಸ್ತೆ,
2ನೇ ಹಂತ ವಿಜಯನಗರ
ಮೈಸೂರು–570017.
Website : www.cescmysore.org
CIN : 40109KA2004SGC035177

ಸಹಾಯಕ ಕಾರ್ಯನಿರ್ವಾಹಕಇಂಜಿನಿಯರ್(ವಿ),
ನ.ರಾ.ಮೊಹಲ್ಲಾ, ಉಪ-ವಿಭಾಗ,
ಚಾ.ವಿ.ಸ.ನಿ.ನಿ., ಮೈಸೂರು.
ಕಛೇರಿ ಸಂಖ್ಯೆ : 0821–2456201
ಮೊಬೈಲ್ : 9448994742


ಕ್ರಮ.ಸಂಖ್ಯೆ :ಸಕಾಇಂ(ವಿ)/ಸಇಂ(ತಾ)/ನರಾಮೊ/19-20/ 1929-31 ದಿನಾಂಕ : 18.07.2019

ಲಗತ್ತು :

## ಜನ ಸಂಪರ್ಕ ಸಭೆ ನಡಾವಳಿ

ದಿನಾಂಕ 10.07.2019 ರಂದು ಬೆಳಿಗ್ಗೆ 11.00 ಗಂಟೆಗೆ ಕಾರ್ಯನಿರ್ವಾಹಕ ಇಂಜಿನಿಯರ್ (ವಿ) ಕಾ ಮತ್ತು ಪಾ ವೃತ್ತ, ಮೈಸೂರುರವರ ಅಧ್ಯಕ್ಷತೆಯಲ್ಲಿ ಎನ್.ಆರ್.ಮೊಹಲ್ಲಾ ಉಪ-ವಿಭಾಗದಲ್ಲಿ ನಡೆದ ಜನ ಸಂಪರ್ಕ ಸಭೆಯ ನಡವಳಿಗಳು.

**ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು / ನೌಕರರುಗಳು.**

1. ಶ್ರೀ. ಸ್ವಾಮಿ.ಹೆಚ್.ಎಸ್, ಕಾರ್ಯನಿರ್ವಾಹಕ ಇಂಜಿನಿಯರ್(ವಿ),ಚಾವಿಸನಿನಿ, ಎನ್.ಆರ್.ಮೊಹಲ್ಲಾ ವಿಭಾಗ,
2. ಶ್ರೀಮತಿ, ಹೇಮಾವತಿ. ಎಂ.ಕೆ, ಸಹಾಯಕ ಇಂಜಿನಿಯರ್(ತಾಂ),ಎನ್.ಆರ್.ಮೊಹಲ್ಲಾ ಉಪವಿಭಾಗ.
3. ಶ್ರೀ ವಿಶ್ವಾಸ್, ಸಹಾಯಕ ಇಂಜಿನಿಯರ್(ವಿ),ನ.ರಾ.ಮೊಹಲ್ಲಾ ಶಾಖೆ.
4. ಶ್ರೀ ವಿನೋದ್ ಕುಮಾರ್, ಸಹಾಯಕ ಇಂಜಿನಿಯರ್(ವಿ), ಬನ್ನಿಮಂಟಪ ಶಾಖೆ.
5. ಶ್ರೀ ವೈ.ಸಿ.ನಿತೇಶ್, ಸಹಾಯಕ ಇಂಜಿನಿಯರ್(ವಿ), ಸಿದ್ದಲಿಂಗಪುರ ಶಾಖೆ
6. ಶ್ರೀಮತಿ ಸುನೀತ, ಕಿರಿಯ ಇಂಜಿನಿಯರ್(ವಿ),ನ.ರಾ.ಮೊಹಲ್ಲಾ ಶಾಖೆ.
7. ಶ್ರಿ ವೆಂಕಟೇಶ್, ಕಿರಿಯ ಇಂಜಿನಿಯರ್(ವಿ), ಬನ್ನಿಮಂಟಪ ಶಾಖೆ.
8. ಶ್ರೀ ನಾಗೇಂದ್ರ ಪ್ರಸಾದ್, ಸಹಾಯಕ ಲೆಕ್ಕಾಧಿಕಾರಿ,ಎನ್.ಆರ್.ಮೊಹಲ್ಲಾ ಉಪವಿಭಾಗ.

**ಸಭೆಯಲ್ಲಿ ಹಾಜರಿದ್ದ ಗ್ರಾಹಕರುಗಳು**

1. ಶ್ರೀ. ಅಶ್ವತ್ ನಾರಾಯಣ, ಹಿಂದೂಸ್ಥಾನ್ ಎಲೆಕ್ಟ್ರಿಕಲ್, ಶ್ರೀ ವಾಸವಿ [illegible] ಪೇಟೆ, ಮೈಸೂರು.
2. ಶ್ರೀ. ಮಂಜುನಾಥ್.ಎಸ್, ನಂ–362, EWS, 3ನೇ ಹಂತ, ಹುಡ್ಕೋ, ಹನುಮಂತನಗರ, ಬನ್ನಿಮಂಟಪ, ಮೈಸೂರು.
3. ಶ್ರೀ ಮೊಹಮ್ಮದ್ ಅಲಿ ಉಲ್ಲಾ ಷರೀಫ್, ನಂ–364, 13ನೇ ಕ್ರಾಸ್, ಅಜೀಜ್ ಸೇಠ್ ಡಬಲ್ ರೋಡ್, ಮೈಸೂರು.
4. ಶ್ರೀ ಲತೀಫ್ ಖಾನ್, ನಂ01, ಶಾಂತಿನಗರ, ಮೈಸೂರು.
5. ಶ್ರೀ ಮಹೇಂದ್ರ ಶೆಟ್ಟಿ, ಬಿ.ಎಂ.ಶ್ರೀನಗರ,ಮೈಸೂರು.
6. ಶ್ರೀ ಶ್ರೀನಿವಾಸ್.ವಿ, ಬಂಬೂ ಬಜಾರ್, ಮೈಸೂರು.

ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಎನ್.ಆರ್.ಮೊಹಲ್ಲಾ ವಿಭಾಗ ರವರು ಸಭೆಗೆ ಹಾಜರಿದ್ದ ಅಧಿಕಾರಿ/ ನೌಕರರು ಮತ್ತು ವಿದ್ಯುತ್ ಗ್ರಾಹಕರುಗಳನ್ನು ಸಭೆಗೆ ಸ್ವಾಗತಿಸಿ ಕೆಳೆದ ತ್ರೈಮಾಸಿಕ ಜನ ಸಂಪರ್ಕ ಸಭೆಯಲ್ಲಿ ನೊಂದಾವಣೆ ಮಾಡಲಾಗಿದ್ದ, ವಿದ್ಯುತ್ ಗ್ರಾಹಕರ ದೂರುಗಳನ್ನು / ಅದಕ್ಕೆ ಸಂಬಂಧಿಸಿದ ಅನುಸರಣಾ ವರದಿಯನ್ನು ಪರಿಶೀಲಿಸಿದರು.

ವಿವರಗಳು ಹಾಗೂ ಅನುಸರಣ ವರದಿಗಳು

| ಕ್ರ. ಸಂ | ಗ್ರಾಹಕರ ಹೆಸರು ಮತ್ತು ವಿಳಾಸ | ನೀಡಲಾಗಿರುವ ದೂರು / ಸಲಹೆ | ಕೈಗೊಂಡಿರುವ ಕ್ರಮಗಳು |
|---|---|---|---|
| 1 | ಶ್ರೀನಸುರುಲ್ಲಾ ಖಾನ್, ಆ್ಯಸ್‌ಫ್ಯೆಯರ್ ಡಿಲೈಟ್ಸ್, ಸುಭಾಷ್‌ನಗರ, ಮೈಸೂರು | 1. ಗ್ರಾಹಕರು ಬಿಲ್ಲುಗಳನ್ನು ಪಾವತಿಸಲು ಶಾಖಾ ಕಚೇರಿಯ ಕೌಂಟರ್‌ಗಳಲ್ಲಿ ಶೆಡ್ ವ್ಯವಸ್ಥೆಯನ್ನು ಮಾಡಿಸುವಂತೆ ಸಲಹೆ ನೀಡಿರುತ್ತಾರೆ. | 1.ಕಾರ್ಯನಿರ್ವಾಹಕ ಇಂಜಿನಿಯರ್ (ಸಿವಿಲ್), ಎನ್.ಆರ್.ಮೊಹಲ್ಲಾ ವಿಭಾಗ ವ್ಯಾಪ್ತಿಯ ಎ.ಟಿ.ಪಿ ಕೌಂಟರ್‌ಗಳಲ್ಲಿ ಬಿಲ್ ಪಾವತಿಸುವ ಗ್ರಾಹಕರಿಗೆ ಅನುಕೂಲವಾಗುವಂತೆ ಪ್ರತ್ಯೇಕ ಬಿಲ್ ಕೌಂಟರ್ ಬಳಿ ಶೆಡ್/ಮೇಲ್ಛಾವಣಿ ವ್ಯವಸ್ಥೆಯನ್ನು ಕಲ್ಪಿಸಿಕೊಡುವಂತೆ ಈ ಹಿಂದೆ ಕಾರ್ಯನಿರ್ವಾಹಕ ಇಂಜನಿಯರ್(ಸಿವಿಲ್), ಎನ್.ಆರ್.ಮೊಹಲ್ಲಾ ವಿಭಾಗರವರಿಗೆ ಮನವಿಯನ್ನು ಸಲ್ಲಿಸಲಾಗಿದ್ದು, ಮತ್ತೊಮ್ಮೆ ದಿನಾಂಕ 07.05.2019ರಲ್ಲಿ ಮರುಕೋರಿಕೆಯನ್ನು ಸಲ್ಲಿಸಲಾಗಿದೆ. |
| | | 2. ಸಮಾಜ ಸೇವಕರುಗಳನ್ನು ಉಪವಿಭಾಗದ ಸಿ.ಯು.ಜಿ what's app ಗುಂಪಿನಲ್ಲಿ ಸೇರ್ಪಡಿಸಿ ವಿದ್ಯುತ್ ಅಡಚಣೆಯ ವಿವರಗಳನ್ನು ನೀಡುವಂತೆ ಕೋರಿರುತ್ತಾರೆ. | 2. ಸಮಾಜ ಸೇವಕರುಗಳ what's app ಗುಂಪಿನಲ್ಲಿ ಸಂಬಂಧಪಟ್ಟ ಶಾಖಾಧಿಕಾರಿಗಳ ಪ್ರತ್ಯೇಕ ದೂರವಾಣಿ ಸಂಖ್ಯೆಯನ್ನು ಸೇರ್ಪಡಿಸಿಕೊಂಡು ನಿಗಮದ ಕಾರ್ಯವೈಕರಿಗಳನ್ನು ಹೆಚ್ಚಿಸುವ ಕುರಿತಾಗಿ ಹಾಗೂ ವಿದ್ಯುತ್ ಸಮಸ್ಯೆಗೆ ಸಂಬಂದಿಸಿದಂತೆ ಮಾಹಿತಿಗಳನ್ನು ನೀಡುವಂತೆ ಸಲಹೆಗಳನ್ನು ನೀಡಲಾಗಿದೆ. |
| 2. | ಮೆ॥ ರೈನೋ ಪಾಲಿಪೇಟ್, ಬನ್ನಿಮಂಟಪ, ಮೈಸೂರು. | ಮೆ॥ ರೈನೋ ಪಾಲಿಪೇಟ್, ಬನ್ನಿಮಂಟಪ, ಮೈಸೂರು. ರವರ ಸ್ಥಾವರ ಸಂಖ್ಯೆ NTP1431ರ ಬಿಲ್ಲಿನಲ್ಲಿ ಹೆಚ್ಚುವರಿಯಾಗಿ ಕಡಿತಗೊಳಿಸಿರುವ ಎಫ್.ಸಿ ಮೊತ್ತವನ್ನು ಹಿಂದಿರುಗಿಸುವಂತೆ ಕೋರಿರುತ್ತಾರೆ. | ಮೆ॥ ರೈನೋ ಪಾಲಿಪೇಟ್, ಬನ್ನಿಮಂಟಪ ಮೈಸೂರುರವರ ಸ್ಥಾವರ ಸಂಖ್ಯೆ NTP1431 ನಿಂದ ಹೆಚ್ಚುವರಿಯಾಗಿ ಕಡಿತಗೊಳಿಸಲಾಗಿದ್ದ ಎಫ್.ಸಿ ಮೊತ್ತವನ್ನು ಗ್ರಾಹಕರ ಖಾತೆಯಿಂದ ಹಿಂಪಡೆದು ಗ್ರಾಹಕರಿಗೆ ಹಿಂದಿರುಗಿಸಲು ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಎನ್.ಆರ್.ಮೊಹಲ್ಲಾ ರವರಿಗೆ ಅನುಮೋದನೆಯನ್ನು ಕೋರಲಾಗಿದೆ. |

**ಮುಂದುವರೆದಂತೆ, ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ಗ್ರಾಹಕರುಗಳ ದೂರುಗಳನ್ನು ಸ್ವೀಕರಿಸಿ ಅದರ ಕುರಿತಾಗಿ ಅಗತ್ಯ ಕ್ರಮಗಳನ್ನು ಕೈಗೊಳ್ಳಲು ಚರ್ಚಿಸಿದರು.**

1. ಶ್ರೀ ಮಂಜುನಾಥ್, ಇ.ಡಬ್ಲ್ಯೂ.ಎಸ್, ಹುಡ್ಕೊ ಬನ್ನಿಮಂಟಪ, ಮೈಸೂರು ರವರು ಬನ್ನಿಮಂಟಪ ಶಾಖೆಯಲ್ಲಿ ಆರ್.ಎ.ಪಿ.ಡಿ.ಆರ್.ಪಿ ತಂತ್ರಾಂಶದ ರೂಟರ್ ಸುಟ್ಟು ಹೋಗಿರುವುದರಿಂದ ಬಿಲ್ಲಗಳನ್ನು ಪರಿಶೀಲಿಸಲು ತುಂಬಾ ತೊಂದರೆಯಾಗುತ್ತಿದೆಂದು ದೂರು ನೀಡಿದರು. ಈ ಸಂಬಂಧ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ಸಂಬಂಧಪಟ್ಟ ಶಾಖಾಧಿಕಾರಿಗಳಿಗೆ ಆರ್.ಎ.ಪಿ.ಡಿ.ಆರ್.ಪಿ ರೂಟರ್‌ನ್ನು ಸರಿಪಡಿಸಲು ಅಗತ್ಯ ಕ್ರಮಕೈಗೊಳ್ಳುವಂತೆ ಸೂಚಿಸಿದರು.
2. ಶ್ರೀ ಮಂಜುನಾಥ್, ಇ.ಡಬ್ಲ್ಯೂ.ಎಸ್, ಹುಡ್ಕೊ ಬನ್ನಿಮಂಟಪ, ರವರು ಇ.ಡಬ್ಲ್ಯೂ.ಎಸ್ ಮನೆಗಳ ಮುಂದೆ ಹಾದು ಹೋಗಿರುವ ಸೆಕೆಂಡರಿ ಲೈನ್‌ಗಳನ್ನು ಕವರ್ ಕಂಡ್ಕ್ಟರ್‌ಗಳಿಗೆ ಬದಲಾಯಿಸುವಂತೆ ಕೋರಿದರು. ಈ ಸಂಬಂಧ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರಿಗೆ ಸ್ಥಳ ಪರಿಶೀಲಿಸಿ ಅಗತ.ವಿದ ಲಿ ಸೂಕ ಕಮವನು. ಕೈ.ಗೊಳ ಲು ಸೂಚಿಸಿದರು.

3. ಶ್ರೀ ಮೊಹಮ್ಮದ್ ಅಲಿ ಉಲ್ಲಾ ಷರೀಫ್ ರವರು ಮೊಹಮ್ಮದ್ ಅಜೀಜ್ ಸೇಠ್ ವ್ಯಾಪ್ತಿಯಲ್ಲಿ ರಸ್ತೆ ಅಗಲೀಕರಣ ಕಾಮಗಾರಿಗೆ ಸಂಬಂಧಿಸಿದಂತೆ ರಸ್ತೆ ಅಗಲೀಕರಣದ ಸಮಯದಲ್ಲಿ ಸ್ಥಾವರಗಳನ್ನು ಶಾಶ್ವತ ನಿಲುಗಡೆಗೊಳಿಸಲು ಮುನ್ಸೂಚನೆ ಪತ್ರಗಳನ್ನು ನೀಡಲು ಕೋರಿದರು. ಈ ಸಂಬಂಧ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ರಸ್ತೆ ಅಗಲೀಕರಣಕ್ಕೆ ಒಳಪಡುವ ಸ್ಥಾವರಗಳಿಗೆ ನಿಗಮದ ನಿಯಾನುಸಾರ ಮುನ್ಸೂಚನಾ ಪ್ರಕಟಣೆಯನ್ನು ಗ್ರಾಹಕರಿಗೆ ನೀಡಿ ಅಗತ್ಯ ಕ್ರಮಕೈಗೊಳ್ಳುವುದಾಗಿ ಸೂಚಿಸಿದರು.
4. ಶ್ರೀ ಮಂಜುನಾಥ್ ರವರು ವಿದ್ಯುತ್ ಅಡಚಣೆಯ ಬಗೆಗಿನ ಮಾಹಿತಿಯನ್ನು ಗ್ರಾಹಕರುಗಳ ದೂರವಾಣಿ/ಮೊಬೈಲ್ ಸಂಖ್ಯೆಗೆ ಈ ಹಿಂದೆ ರವಾನೆಯಾಗುತ್ತಿದಂತೆ ಸಂದೇಶಗಳನ್ನು ಗ್ರಾಹಕರ ದೂರವಾಣಿ ಮೊಬೈಲ್‌ಗೆ ನೀಡಲು ಅನುವು ಮಾಡುವಂತೆ ಮನವಿ ಮಾಡಿದರು. ಈ ಕುರಿತಾಗಿ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ಈ ಹಿಂದೆ URJA ಮಿತ್ರ ತಂತ್ರಾಂಶದ ಮುಖೇನಾ ಗ್ರಾಹಕರಿಗೆ ವಿದ್ಯುತ್ ಅಡಚಣೆಯ ವಿವರವನ್ನು ನೀಡುತ್ತಿದ್ದಂತೆ, ಮುಂದಿನ ದಿನಗಳಲ್ಲಿಯು ಸಹ ಗ್ರಾಹಕರ ಮೊಬೈಲ್/ದೂರವಾಣಿಗೆ ಸಂದೇಶವನ್ನು ನೀಡಲು ಯೋಜನಾ ಶಾಖೆ, ನಿಗಮ ಕಾರ್ಯಾಲಯಕ್ಕೆ ಮನವಿಯನ್ನು ಸಲ್ಲಿಸುವಂತೆ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಎನ್.ಆರ್.ಮೊಹಲ್ಲಾ ಉಪವಿಭಾಗರವರಿಗೆ ಸೂಚಿಸಿ ಸಭೆಯನ್ನು ಮುಕ್ತಾಯಗೊಳಿಸಿದರು.

18/7/2019

**ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)**
**ಎನ್.ಆರ್.ಮೊಹಲ್ಲಾ ಉಪ–ವಿಭಾಗ**
**ಚಾ.ವಿ.ಸ.ನಿ.ನಿ. ಮೈಸೂರು.**

**ಪ್ರತಿಗಳು:–**

- ಮುಖ್ಯ ಇಂಜಿನಿಯರ್(ವಿ), ಚಾವಿಸನಿನಿ., ವಲಯ ಕಛೇರಿ, ಮೈಸೂರುರವರ ಕೃಪಾವಗಾಹನೆಗಾಗಿ ಸಲ್ಲಿಸಲಾಗಿದೆ.
- ಅಧೀಕ್ಷಕ ಇಂಜಿನಿಯರ್(ವಿ), ಚಾವಿಸನಿನಿ., ಕಾ ಮತ್ತು ಪಾ ವೃತ್ತ, ಮೈಸೂರುರವರ ಕೃಪಾವಗಾಹನೆಗಾಗಿ ಸಲ್ಲಿಸಲಾಗಿದೆ.
- ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಚಾವಿಸನಿನಿ., ಎನ್.ಆರ್.ಮೊಹಲ್ಲಾರವರ ಕೃಪಾವಗಾಹನೆಗಾಗಿ ಸಲ್ಲಿಸಲಾಗಿದೆ.
- ಎಲ್ಲಾ ಶಾಖಾಧಿಕಾರಿಗಳು, ಎನ್.ಆರ್.ಮೊಹಲ್ಲಾ/ ಬನ್ನಿಮಂಟಪ/ ಸಿದ್ದಲಿಂಗಪುರರವರುಗಳು ಮೇಲ್ಕಂಡ ದೂರಗಳನ್ವಯ ಸ್ಥಳಪರಿಶೀಲಿಸಿ ಉಪವಿಭಾಗ ಕಚೇರಿಗೆ ವರದಿ ನೀಡುವುದು.
- ಸಹಾಯಕ ಲೆಕ್ಕಾಧಿಕಾರಿ /ಹಿರಿಯ ಸಹಾಯಕ/ ಮುಖ್ಯ ಕಡತಕ್ಕೆ/ಕ.ಪ್ರ.